"ದೆವ್ವ?... ಹತ್ತಿರಿಕೆ... ನನ್ನನ್ನೇ ಯಾಮಾರಿಸುವಂತಹ ದೆವ್ವ ಇನ್ನೂ ಹುಟ್ಟಿಲ್ಲ ಅಂದ್ಕೊಂಡಿದ್ದೀನಿ!" ಕೈಯಲ್ಲಿ ಮದ್ಯದ ಗ್ಲಾಸನ್ನು ಹಿಡಿದುಕೊಂಡು ಎದ್ದು ನಿಂತು ಹೇಳಿದೆ. ಎದುರಿಗೆ ಗೂಡಿನಲ್ಲಿ ಬೆಂಕಿ ದಗದಗನೆ ಉರಿಯುತ್ತಿತ್ತು.

"ನಾನು ಹುಟ್ಟಿ ಇಪ್ಪತ್ತೆಂಟು ವರ್ಷಗಳಾದವು. ದೆವ್ವ ಅನ್ನೋದು ಕೇಳಿದ್ದೇನೇ ಹೊರತು ಈವರೆಗೆ ನೋಡಿಲ್ಲ." ಎಂದೆ.

ಅವನ ಪಕ್ಕದಲ್ಲೇ ಇದ್ದ ಮುದುಕಿ, ನಿಸ್ತೇಜ ಅಗಲ ಕಂಗಳಿಂದ ಬೆಂಕಿಯನ್ನೇ ನೋಡುತ್ತಾ, "ಮಗಾ, ನಿನ್ನ ಇಪ್ಪತ್ತೆಂಟು ವರ್ಷಗಳ ಜೀವಮಾನದಲ್ಲಿ ಇಂತಹ ಮನೆಯನ್ನೂ ನೋಡಿಲ್ಲವೆಂದು ಅಂದ್ಕೊಂಡಿದ್ದೇನೆ... ಇಪ್ಪತ್ತೆಂಟು ಅಂದೆಯಲ್ಲ? ನೋಡುವುದು ಇನ್ನೂ ಇದೆ ಮಗಾ... ಬಹಳಷ್ಟು!" ಕತ್ತು ಅಡ್ಡ ಹಾಕುತ್ತಾ ಹೇಳಿದಳು.

ನನಗ್ಯಾಕೋ ಈ ವೃದ್ಧ ದಂಪತಿ ಬೇಕಂತಲೇ ಈ ಮನೆಯೊಳಗೆ ಎಂತಾದ್ದೊ ಅತೀಂದ್ರಿಯ ವಿದ್ಯಮಾನಗಳು ಜರುಗುತ್ತಿವೆ ಎಂದು ಹೆದರಿಸುತ್ತಿದ್ದಾರೆಂಬ ಸಂದೇಹ ಬಲವಾಗತೊಡಗಿತು. ನಾನು ಕೈಯಲ್ಲಿದ್ದ ಗ್ಲಾಸನ್ನು ಕೆಳಗಿಡುತ್ತಾ ಆ ರೂಮಿನ ಸುತ್ತ ಒಮ್ಮೆ ದೃಷ್ಟಿ ಹಾಯಿಸಿದೆ. ರೂಮಿನ ಕೊನೆಯಲ್ಲಿದ್ದ ಕನ್ನಡಿಯೊಂದರಲ್ಲಿ ನನ್ನ ಪ್ರತಿಬಿಂಬವು ಕುಬ್ಜವಾಗಿಯೂ ಅಗಲವಾಗಿಯೂ ವಿಕೃತಗೊಂಡು ಪ್ರತಿಫಲಿಸಿತು.

"ಇರಲಿ... ಇರಲಿ, ನೀವು ಹೇಳಿದಂತೆ ಈ ರಾತ್ರಿ ಅಂತದ್ದೇನಾದರೂ ಘಟಿಸಿದರೆ, ಏನೋ ಹೊಸತೊಂದನ್ನು ನೋಡಿದಂತಾಗುತ್ತದೆ. ನನ್ನದು ತೆರೆದ ಮನಸ್ಸು. ಯಾವುದೇ ಪೂರ್ವಗ್ರಹಗಳಿಲ್ಲ." ಎಂದೆ.

"ನೋಡಪ್ಪ, ನಿನ್ನಿಷ್ಟ. ಇದು ನಿನ್ನ ಸ್ವಂತ ಆಯ್ಕೆ..." ಸೊಟ್ಟ ಕೈಯ ಮುದುಕ ನನ್ನನ್ನೇ ನೋಡುತ್ತಾ ಹೇಳಿದ.

ಹೊರಗೆ ಮೊಗಸಾಲೆಯಲ್ಲಿ ಕೋಲನ್ನೂರುತ್ತಾ ಯಾರೋ ಕಾಲೆಳೆದುಕೊಂಡು ಬರುತ್ತಿರುವ ಸದ್ದು ಕೇಳಿಸಿತು. ಸ್ವಲ್ಪ ಹೊತ್ತಿನ ಬಳಿಕ 'ಕರ್ರ್' ಎಂದು ಸದ್ದು ಮಾಡುತ್ತಾ ಬಾಗಿಲು ತೆರೆದುಕೊಂಡಿತು. ಒಳಗಿದ್ದ ಮುದುಕನಿಗಿಂತಲೂ ಹೆಚ್ಚು ವಯಸ್ಸಾದ, ಅವನಿಗಿಂತಲೂ ಹೆಚ್ಚು ಬೆನ್ನು ಬಾಗಿದ ಮತ್ತೊಬ್ಬ ಮುದುಕ ಒಳಗೆ ಪ್ರವೇಶಿಸಿದ. ಅವನು ತನ್ನ ಕೃಶ ಶರೀರದ ಭಾರವನ್ನೆಲ್ಲಾ ತನ್ನ ಊರುಗೋಲಿನ ಮೇಲೆ ಹಾಕಿದ್ದ. ಅವನ ಕಣ್ಣುಗಳ ಮೇಲೊಂದು ಅಡ್ಡ ಪಟ್ಟಿ ನೇತಾಡುತ್ತಿತ್ತು. ಅವನ ಕೆಳತುಟಿ ಇಳಿಬಿದ್ದು ಹಳದಿ ಹಲ್ಲುಗಳು ಎದ್ದು ಕಾಣುತ್ತಿದ್ದವು. ಅವನು ಮೇಜಿನ ಎದುರು ಬದಿಗಿದ್ದ ಖಾಲಿ ಕುರ್ಚಿಯ ಕಡೆಗೆ ಸಾಗಿ ಹೇಗುಹೇಗೋ ಕುಳಿತುಕೊಂಡು ಒಂದೇ ಸಮನೆ ಕೆಮ್ಮತೊಡಗಿದ. ಸೊಟ್ಟ ಕೈಯ ಮುದುಕ ಅವನ ಕಡೆಗೊಮ್ಮೆ ಅಸಹನೆಯಿಂದ ನೋಡಿ ಮುಖ ತಿರುಗಿಸಿದ. ಮುದುಕಿ ಅವನನ್ನು ಗಮನಿಸಿಯೇ ಇಲ್ಲವೆಂಬಂತೆ ಉರಿಯುತ್ತಿದ್ದ ಬೆಂಕಿಯನ್ನು ಮಂತ್ರಮುಗ್ಧಳಂತೆ ನೋಡತೊಡಗಿದಳು.

"ನಾನು ಮೊದಲೇ ಹೇಳಿದ್ದೇನೆ ನೋಡಪ್ಪ. ಇದು ನಿನ್ನ ಸ್ವಂತ ಆಯ್ಕೆ." ಗೂನು ಬೆನ್ನಿನ ಮುದುಕನ ಕೆಮ್ಮು ಕಮ್ಮಿಯಾಗುತ್ತಿದ್ದಂತೆಯೇ, ಸೊಟ್ಟ ಕೈಯ ಮುದುಕ ಹೇಳಿದ.

"ಖಂಡಿತವಾಗಿಯೂ." ನಾನೆಂದೆ.

ನನ್ನನ್ನು ಇದೇ ಮೊದಲ ಬಾರಿ ಗಮನಿಸಿದವನಂತೆ ಗೂನು ಬೆನ್ನಿನ ಮುದುಕ ಕಣ್ಣಿಗೆ ಕಟ್ಟಿದ್ದ ಪಟ್ಟಿಯನ್ನು ಮೇಲೆತ್ತುತ್ತಾ ತಲೆಯನ್ನು ವಾರೆಯಾಗಿಸಿ ನೋಡುತ್ತಾ ಮತ್ತೆ ಗೊರಲು ದನಿಯಿಂದ ಕೆಮ್ಮತೊಡಗಿದ.

"ಇದನ್ನು ಕುಡಿ." ಎಂದು ಸೊಟ್ಟ ಕೈಯ ಮುದುಕ ಗೂನು ಬೆನ್ನಿನ ಮುದುಕನೆಡೆಗೆ ಬಿಯರ್ ಬಾಟಲನ್ನು ತಳ್ಳಿದ. ಕಂಪಿಸುವ ಕೈಗಳಿಂದ ಬಾಟಲಿಯಿಂದ ಗ್ಲಾಸಿಗೆ ಸುರಿಯುತ್ತಿರುವಂತೆ